ಜನ ಶಿಕ್ಷಕರಲ್ಲೂ ಇದೇ ಮಾರ್ಚ್ ತಿಂಗಳ ಕೊನೆಗೆ ಮುಖ್ಯೋಪಾಧ್ಯಾಯರು ಮತ್ತು ಶಾರೀರಿಕ ಶಿಕ್ಷಕರು ಇವರಿಬ್ಬರೂ ನಿವೃತ್ತಿಯಾಗಲಿದ್ದು ಉಳಿದ ಇಬ್ಬರು ಶಿಕ್ಷಕರಲ್ಲಿ ಒಬ್ಬರು ವರ್ಗಾವಣೆಗಾಗಿ ಈಗಾಗಲೇ ಪ್ರಯತ್ನಿಸುತ್ತಿರುವುದಾಗಿ ತಿಳಿದು ಬಂದಿದ್ದು ಆಗ ಕೇವಲ ಒಬ್ಬರೇ ಶಿಕ್ಷಕರು ಉಳಿದು ಈ ಶಾಲೆಯು ಮುಚ್ಚುವ ಸಾಧ್ಯತೆ ಬರಬಹುದಾಗಿದೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಈ ಶಾಲೆಗೆ ಕೊರತೆಯಿರುವ ಶಿಕ್ಷಕರನ್ನು ತುರ್ತು ಭರ್ತಿ ಮಾಡುವರೇ, ಸೂಕ್ತ ಕ್ರಮ ಕೈಗೊಳ್ಳುವಂತೆ ಸರಕಾರವನ್ನು, ಈ ಸದನದ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷಿಣಿಯವರೆ, ಅಲ್ಬಾಡಿ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ಒಟ್ಟು ಪ್ರೌಢಶಾಲೆಗೆ 7 ಶಿಕ್ಷಕರ ಹುದ್ದೆಗಳು ಮಂಜೂರಾತಿ ಆಗಿದೆ. ಅವುಗಳ ಪೈಕಿ 4 ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 2 ಸಹ ಶಿಕ್ಷಕರ ಮತ್ತು ಒಂದು ವೃತ್ತಿ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿದ್ದುದರಿಂದ ಖಾಲಿ ಬಿದ್ದ ಹುದ್ದೆಗಳನ್ನು ತುಂಬಲಾಗಲಿಲ್ಲ. ಈ ಶಾಲೆಯಲ್ಲಿ ಇರುವಂತಹ ಪರಿಸ್ಥಿತಿಯು ರಾಜ್ಯದ ಅನೇಕ ಪ್ರೌಢಶಾಲೆಗಳಲ್ಲಿ ಇದ್ದು ಒಟ್ಟು 702 ಸಹ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ತುಂಬಲು ಇತ್ತೀಚೆಗೆ ಆರ್ಥಿಕ ಮಿತವ್ಯಯವನ್ನು ಸಡಿಲಗೊಳಿಸಲಾಗಿದೆ. ಇವುಗಳನ್ನು ತುಂಬಲು ವಿಶೇಷ ನಿಯಾಮಾವಳಿಗಳನ್ನು ರೂಪಿಸಲಾಗುತ್ತಿದೆ. ಆದಷ್ಟು ಬೇಗ ಈ ನಿಯಮಾವಳಿಗಳನ್ನು ರೂಪಿಸಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಬರುವ ಜೂನ್ ಒಳಗೆ ಈ ಹುದ್ದೆಗಳನ್ನು ತುಂಬುವುದಕ್ಕೆ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

**ಬಿ.ಡಿ.ಎ ವಶದಲ್ಲಿರುವ ಅಭಿವೃದ್ಧಿಗೊಂಡಿರುವ ಬಡಾವಣೆಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯ ವಶಕ್ಕೆ**

ಶ್ರೀ ಪೆರಿಕಲ್ ಎಂ.ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಅಧ್ಯಕ್ಷಿಣಿಯವರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಶದಲ್ಲಿರುವ ಹಲವಾರು ಬಡಾವಣೆಗಳಾದ ಜೆ.ಪಿ.ನಗರ, ಕೋರಮಂಗಲ, ಬಿಟಿಎಂ ಲೇಔಟ್, ಆರ್.ಟಿ. ನಗರ, ನಂದಿನಿ ಲೇಔಟ್, ಬನಶಂಕರಿ ಎರಡು ಹಾಗೂ ಮೂರನೇ ಹಂತಗಳು, ಕುಮಾರಸ್ವಾಮಿ ಲೇಔಟ್ ಮುಂತಾದವುಗಳು ಪೂರ್ತಿ ಅಭಿವೃದ್ಧಿಗೊಂಡಿದ್ದು, ಸಾವಿರಾರು ಮನೆಗಳು ಬಂದಿದ್ದು, ಇಲ್ಲಿಯವರೆಗೆ ಬೆಂಗಳೂರು ಮಹಾನಗರ ಪಾಲಿಕೆಯ ವಶಕ್ಕೆ ನೀಡಿರುವುದಿಲ್ಲ, ಈ ಬಡಾವಣೆಗಳು ಅಭಿವೃದ್ಧಿಯಾಗಿ 10 ವರ್ಷಗಳಾದರೂ ಸಹ, ಇವುಗಳನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ನೀಡದೇ ಇರುವುದರಿಂದ ಈ ಬಡಾವಣೆಗಳಲ್ಲಿ ವಾಸಿಸುವ ಸಾವಿರಾರು ನಾಗರೀಕರು ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಗಳಲ್ಲಿ ಭಾಗವಹಿಸಲು ಸಾಧ್ಯವಾಗಿಲ್ಲ, ಅಲ್ಲದೆ ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಡಾವಣೆಗಳಲ್ಲಿ ರಸ್ತೆಗಳನ್ನು ಗುಡಿಸುವ ವ್ಯವಸ್ಥೆ, ಆಸ್ಪತ್ರೆ, ಹಾಗೂ ಶಾಲೆಗಳ ಸೌಕರ್ಯಗಳಿರುವುದಿಲ್ಲ. ಈ ಬಡಾವಣೆಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯವರ ವಶಕ್ಕೆ ನೀಡಿದರೆ ಮಾತ್ರ ಜನತೆಗೆ ಎಲ್ಲಾ ಪೌರ ಸೌಲಭ್ಯಗಳು ದೊರಕಲು ಸಾಧ್ಯವಾಗುತ್ತದೆ. ಆದ್ದರಿಂದ ಸರ್ಕಾರದವರು ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಮೇಲ್ಕಂಡ ಬಡಾವಣೆಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯ ವಶಕ್ಕೆ ನೀಡಬೇಕೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳನ್ನು ಕೋರುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷಿಣಿಯವರೆ, ಮಾನ್ಯ ಶಾಸಕರು ಎತ್ತಿದಂಥ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದು ಸೂಕ್ತಕ್ರಮ ತೆಗೆದುಕೊಳ್ಳಲಾಗುವುದು.